ಕರ್ನಾಟಕ ವಿಧಾನಸಭೆ

KARNATAKA LAGISLATIVE ASSEMBLY

(ಏಳನೆಯ ವಿಧಾನ ಸಭೆ)

ಮೊದಲನೆಯ ಅಧಿವೇಶನ

ಮಂಗಳವಾರ, ೨೫ನೇ ಜನವರಿ ೧೯೮೩/ಮಾಘ ೫, ೧೯೦೪

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ಒಂಬತ್ತು ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಪೀಠವನ್ನಲಂಕರಿಸಿದ್ದರು]

ಸಭೆಯಲ್ಲಿ ಮಂಡಿಸಲಾದ ಕಾಗದ ಪತ್ರಗಳು :—

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).— ಸ್ವಾಮಿ, ಈ ಕೆಳಗೆ ಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ. (೧) ಭಾರತ ಸಂವಿಧಾನದ ೨೧೩ (೧)ನೇ ಅನುಚ್ಛೇದದ ಮೇರೆಗೆ ಹೊರಡಿಸಲಾದ

(ಅ) ೧೯೮೨ನೇ ಇಸವಿಯ ಕರ್ನಾಟಕ ಕೃಷಿ ವರಮಾನ ತೆರಿಗೆ (ತಿದ್ದುಪಡಿ)ಗೆ ಸಂಬಂಧಿಸಿದ ಅಧ್ಯಾದೇಶ (೧೯೮೨ನೇ ಇಸವಿಯ ಅಧ್ಯಾದೇಶ ಸಂಖ್ಯೆ ೭) ;

(ಆ) ೧೯೮೨ನೇ ಇಸವಿಯ ಕರ್ನಾಟಕ ರಾಜ್ಯದ ಜಮೀನನ್ನು ಭಾಗ ಮಾಡುವುದನ್ನು ತಡೆಗಟ್ಟುವುದಕ್ಕೂ ಹಾಗೂ ಹಿಡುವಳಿ ಜಮೀನನ್ನು ಒಟ್ಟುಗೂಡಿಸುವುದಕ್ಕೆ ಸಂಬಂಧಿಸಿದ (ತಿದ್ದುಪಡಿ) ಅಧ್ಯಾದೇಶ (೧೯೮೨ನೇ ಇಸವಿಯ ಅಧ್ಯಾದೇಶ ಸಂಖ್ಯೆ ೮) ;

(ಇ) ೧೯೮೨ನೇ ಇಸವಿಯ ಕರ್ನಾಟಕ ರಾಜ್ಯದ ಸ್ಟ್ಯಾಂಪು (ತಿದ್ದುಪಡಿ) ಅಧ್ಯಾದೇಶ (೧೯೮೨ನೇ ಇಸವಿಯ ಅಧ್ಯಾದೇಶ ಸಂಖ್ಯೆ ೯) ಹಾಗೂ

(ಈ) ೧೯೮೨ನೇ ಇಸವಿಯ ಕರ್ನಾಟಕ ರಾಜ್ಯದ ಬಾಡಿಗೆ ನಿಯಂತ್ರಣ (ತಿದ್ದುಪಡಿ) ಅಧ್ಯಾದೇಶ ಇಸವಿಯ (೧೯೮೨ನೇ ಇಸವಿಯ ಅಧ್ಯಾದೇಶ ಸಂಖ್ಯೆ ೧೦),

(೨) ೧೯೬೪ನೇ ಇಸವಿಯ ಕರ್ನಾಟಕ ರಾಜ್ಯದ ಚಲನ ಚಿತ್ರ (ನಿಯಂತ್ರಣ) ಶಾಸನದ ೨೨ನೇ ಕಲಮಿನ ಮೇರೆಗೆ ಹೊರಡಿಸಲಾದ

ವಿಜಾಪುರದ ಸೈನಿಕ ಶಾಲೆಯವರಿಂದ ೩೫ ಮಿ.ಮೀ.ನ ಚಲನ ಚಿತ್ರ ಪ್ರದರ್ಶನದ ವಿನಾಯಿತಿಯ ಮಂಜೂರಾತಿಗೆ ಸಂಬಂಧಿಸಿದಂತೆ ೧೯೮೨ನೇ ನವೆಂಬರ್ ಮಾಹೆಯ ಎಚ್.ಡಿ. ೨೬೩ ಸಿ.ಎನ್.ಎ. ೮೨ನೇ ಕ್ರಮಾಂಕದ ಆದೇಶ

(೩) ಹಾಸನ ಜಿಲ್ಲೆಯ ಮೆಸರ್ಸ್ ಕಾಡಮನೆ ಎಸ್ಟೇಟಿನ ಆಡಳಿತ ವರ್ಗದವರಿಂದ ಚಲನ ಚಿತ್ರ ಪ್ರದರ್ಶನ ವಿನಾಯಿತಿಯ ಮಂಜೂರಾತಿಗೆ ಸಂಬಂಧಿಸಿದಂತೆ ಕ್ರಮಾಂಕ ಎಚ್.ಡಿ. ೩೦೪ ಸಿ.ಎನ್.ಎ. ೮೨, ೧೯೮೨ನೇ ನವೆಂಬರ್ ಮಾಹೆಯ ಆದೇಶ

ಚಿಕ್ಕಮಗಳೂರು ಆರಕ್ಷಕರ ಕಲ್ಯಾಣ ಕೇಂದ್ರದವರಿಂದ ೩೫ ಮಿ.ಮೀ.ನ ದೊಡ್ಡದಾದ ಚಲನ ಚಿತ್ರ ಪ ದರ್ಶನದ ವಿನಾಯಿತಿಯ ಮಂಜೂರಾತಿಗೆ ಸಂಬಂಧಿಸಿದ ಆದೇಶ

(೪) ೧೯೬೬ನೇ ಇಸವಿಯ ಕರ್ನಾಟಕ ರಾಜ್ಯದ ನಗರ ಸಭಾ ಶಾಸನದ ೪೨೧ (೬)ನೇ ಕಲಮಿನ ಮೇರೆಗೆ ೧೯೮೨ನೇ ಇಸವಿಯ ಕರ್ನಾಟಕ ರಾಜ್ಯದ ನಗರ ಸಭೆಗಳ (ತಿದ್ದುಪಡಿ) ನಿಯಮಗಳಿಗೆ

ಸಂಬಂಧಿಸಿದಂತೆ ಹೊರಡಿಸಲಾದ ೧೦ನೇ ಡಿಸೆಂಬರ್ ೧೯೮೨ನೇ ದಿನಾಂಕದ ಹೆಚ್. ಯು. ಡಿ. ೪೬ ಎಲ್‌ಆರ್‌ಬಿ ೮೨ನೇ ಕ್ರಮಾಂಕದ ಅಧಿಸೂಚನೆ

(೫) ೧೯೬೪ನೇ ಇಸವಿಯ ಬೆಂಗಳೂರು ನೀರು ಸರಬರಾಜು ಹಾಗೂ ಗ್ರಾಮಸಾರ ಮಂಡಳಿಯಂ ಶಾಸನದ ೫ (ಅ)ನೇ ಕಲಮಿನ ಮೇರೆಗೆ, ೧೯೬೭–೬೮, ೧೯೬೯–೭೦ ಹಾಗೂ ೧೯೭೧–೭೨ನೇ ಸಾಲುಗಳಿಗೆ ಸಂಬಂಧಿಸಿದ ಬೆಂಗಳೂರಿನ ನೀರು ಸರಬರಾಜು ಹಾಗೂ ಗ್ರಾಮಸಾರ ಮಂಡಳಿಯ ಲೆಕ್ಕ ಪತ್ರದ ತನಿಖಾ ವರದಿ ;

(೬) ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯ (ಅ)ನೇ ಕಲಮಿನ ಮೇರೆಗೆ ಹೊರಡಿಸಿದ ಕರ್ನಾಟಕ ಕೃಷಿ ಕೈಗಾರಿಕೆಗಳ ನಿಗಮಂಕ್ಕೆ ಸಂಬಂಧಿಸಿದ ೧೯೮೦–೮೧ನೇ ಸಾಲಿನ ೧೪ನೇ ವಾರ್ಷಿಕ ವರದಿ;

(೭) ೧೯೫೨ನೇ ಇಸವಿಯ ವಿಚಾರಣಾ ಆಯೋಗ ಶಾಸನದ ೩ (೪)ನೇ ಕಲಮಿನ ಮೇರೆಗೆ ಹೊರಡಿಸಲಾದ ೭ನೇ ಫೆಬ್ರುವರಿ ೧೯೮೨ ರಂದು ಬೆಂಗಳೂರಿನಲ್ಲಿ ಸಂಭವಿಸಿದ ವೀನಸ್ ಸರ್ಕಸ್ ಬೆಂಕಿ ಆಕಸ್ಮಿಕದ ಬಗ್ಗೆ ನ್ಯಾಯಾಧೀಶರಾದ ಶ್ರೀ ಎನ್. ಆರ್. ಕುದೂರ್ ಅವರ ಏಕ ಸದಸ್ಯ ಆಯೋಗದ ವರದಿಯೊಂದಿಗೆ ಕೈಕೊಳ್ಳಬೇಕಾದ ಕ್ರಮದ ಜ್ಞಾಪನಾ ಪತ್ರ;

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡಲಾಗಿದೆ.

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತಿರಾಜ್ ಮಂತ್ರಿಗಳು). ಸ್ವಾಮಿ, ಶಿಕ್ಷಣ ಮಂತ್ರಿಗಳ ಪರವಾಗಿ ಈ ಕೆಳಗೆ ಕಂಡ ಕಾಗದ ಪತ್ರವನ್ನು ಸಭೆಯ ಮುಂದಿಡುತ್ತೇನೆ.

೧೯೬೬ನೇ ಇಸವಿಯ ಕರ್ನಾಟಕ ಸೆಕೆಂಡರಿ ಶಿಕ್ಷಣ ಪರೀಕ್ಷಾ ಮಂಡಲಿಯ ಶಾಸನದ ೨೫ (೩)ನೇ ಕಲಮಿನ ಮೇರೆಗೆ ಹೊರಡಿಸಿದ ೧೯೮೧–೮೨ನೇ ಸಾಲಿನ ಕರ್ನಾಟಕ ಸೆಕೆಂಡರಿ ಶಿಕ್ಷಣ ಪರೀಕ್ಷಾ ಮಂಡಲಿಯ ವಾರ್ಷಿಕ ಆಡಳಿತ ವರದಿ.

ಅಧ್ಯಕ್ಷರು.—ಕಾಗದ ಪತ್ರವನ್ನು ಸಭೆಯ ಮುಂದಿಡಲಾಗಿದೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಸ್ವಾಮಿ ಸಾರಿಗೆ ಹಾಗೂ ಕಾರ್ಮಿಕ ಮಂತ್ರಿಯವರ ಪರವಾಗಿ ಕೆಳಗೆ ಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ:

(೧) ಕರ್ನಾಟಕ ರಾಜ್ಯದಲ್ಲಿ '' ಕೇರ್ ಸಂಸ್ಥೆ '' ಯವರು ಹೊಂದಿರುವ ವಾಹನಗಳಿಗೆ ಸಂಬಂಧಿಸಿದಂತೆ ತೆರಿಗೆ ನೀಡುವುದನ್ನು ವಿನಾಯಿತಿ ಮಾಡುವ ಬಗ್ಗೆ ಹೊರಡಿಸಲಾದ ೨ನೇ ನವೆಂಬರ್ ೧೯೮೨ನೇ ದಿನಾಂಕದ ಹೆಚ್. ಡಿ. ೨೦೯ ಟಿ.ಎಂ.ಟಿ. ೮೧ನೇ ಕ್ರಮಾಂಕದ ಅಧಿಸೂಚನೆ ಹಾಗೂ

(೨) ದೈಹಿಕ ಅಂಗವಿಕಲ ತರಬೇತಿ ಕೇಂದ್ರದ ಸಂಘದವರು ಹೊಂದಿರುವ ೫೨೪೭ ಹಾಗೂ ಎಂ.ವೈ.ಓ. ೯೯೧೯ನೇ ಸಂಖ್ಯೆಯ ಮೋಟಾರು ವಾಹನಗಳಿಗೆ ಸಂಬಂಧಿಸಿದಂತೆ ತೆರಿಗೆ ನೀಡುವುದನ್ನು ವಿನಾಯಿತಿ ಮಾಡುವ ಬಗ್ಗೆ ಹೊರಡಿಸಲಾದ ೧೨ನೇ ಅಕ್ಟೋಬರ್ ೧೯೮೧ನೇ ಕ್ರಮಾಂಕದ ಅಧಿಸೂಚನೆ

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಗಿದೆ.

ಕಾರ್ಯದರ್ಶಿಗಳ ವರದಿ

ಕಾರ್ಯದರ್ಶಿ.—ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷರು ೧೭ನೇ ಡಿಸೆಂಬರ್ ೧೯೮೨ ರಂದು ವಿಧಾನ ಸಭಾ ಅಧ್ಯಕ್ಷರಿಗೆ ಸಲ್ಲಿಸಿದ ಕೆಳಕಂಡ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

(೮) ಗ್ರಾಮೀಣ ಅಭಿವೃದ್ಧಿ ಹಾಗೂ ಸಹಕಾರ ಇಲಾಖೆಗೆ ಸಂಬಂಧಿಸಿದಂತೆ ೧೯೭೫–೭೬ ರಿಂದ ೧೯೭೮–೭೯ನೇ ಸಾಲುಗಳ ಹಣ ವಿನಿಯೋಗ ಹಾಗೂ ವಿತ್ತೀಯ ಲೆಕ್ಕಗಳ ಬಗ್ಗೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ೧೫ನೆಯ ವರದಿ.

(೯) ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ೧೯೭೫–೭೬ ರಿಂದ ೧೯೭೮–೭೯ನೇ ಸಾಲುಗಳ ಹಣ ವಿನಿಯೋಗ ಹಾಗೂ ವಿತ್ತೀಯ ಲೆಕ್ಕಗಳ ಮತ್ತು ೧೯೭೩–೭೪ನೇ ಸಾಲುಗಳ ಪೂರಕ ತನಿಖಾ ವರದಿಗಳೂ ಸೇರಿದಂತೆ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ ೧೬ನೇ ವರದಿ.